ದಿನಾಂಕಃ 27.09.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಪಿ ವೈ ವಕೀಲರಿಂದಃ ಆರೋಪಿತರ ಪರವಾಗಿಃ

9. ನನ್ನ ಗಂಡ ಮತ್ತು 1 ನೇ ಆರೋಪಿ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಆರೋಪಿತರು ಕುರಿಗಳನ್ನು ಸಾಕಿಕೊಂಡಿದ್ದಾರೆ ಎಂದರೆ ಸರಿ. ಅವರು ಸುಮಾರು 250-300 ಕುರಿಗಳನ್ನು ಸಾಕಿಕೊಂಡಿದ್ದಾರೆ ಎಂದರೆ ಸರಿ. ಸದರಿ ಕುರಿಗಳನ್ನು ಮೇಯಿಸಿಕೊಂಡು ಆರೋಪಿತರು ಊರಿನಿಂದ ಹೊರಗೆ

ಹೋಗುತ್ತಾರೆ ಎಂದರೆ ಸರಿ. ಆ ರೀತಿ ಅವರು ಹೋದರೆ ವಾಪಾಸ್ಸು ಬರುವುದು ಸಂಜೆ 5.30 ಯಿಂದ 6.00 ಗಂಟೆಯಾಗುತ್ತದೆ ಎಂದರೆ ಸರಿ.

10. ನನ್ನ ಗಂಡ ವ್ಯವಸಾಯ ಮಾಡುತ್ತಾರೆ ನಾನು ಅವರೊಂದಿಗೆ ಕೆಲಸ ಮಾಡುತ್ತೇನೆ. ನಮಗೆ ಸೇರಿದ ಅಡಿಕೆ ತೋಟವಿಲ್ಲ. ನಾವು ರಾಗಿಯನ್ನು ಬೆಳೆಯುತ್ತೇವೆ. ಆ ಬಗ್ಗೆ ನೀವು ಮನೆಯ ಬಳಿಯೇ ಕಣವನ್ನು ಮಾಡಿಕೊಂಡಿದ್ದೀರಿ ಎಂದರೆ ಸರಿ. ಘಟನೆ ನಡೆಯಿತು ಎನ್ನಲಾದ ನೀವು ಏನು ಕೆಲಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ಕಣದಲ್ಲಿ ಕೆಲಸ ಮಾಡುತ್ತಿದ್ದೆನು ಎನ್ನುತ್ತಾರೆ. ಆ ಸಮಯದಲ್ಲಿ ಹುಲ್ಲನ್ನು ತೆಗೆಯಲು ಕೊಂಡಿ ಇರುವ ಮೆರಿಗೋಲನ್ನು ಬಳಸುತ್ತೀರಿ ಎಂದರೆ ಸರಿ.

11. ಆರೋಪಿತರ ಬಳಿ ಟ್ರ್ಯಾಕ್ಟರ್ ಇಲ್ಲ. ಆರೋಪಿತರು ಕುರಿ ಕಾಯುವ ಕೆಲಸಕ್ಕೆ ಹೋದಾಗ 1 ನೇ ಆರೋಪಿಯ ಮಗಳು ಹೊಂಬಾಳೆ ಅವರ ಮನೆಯಲ್ಲಿ ಇರುತ್ತಾಳೆ ಎಂದರೆ ಸರಿ. ಆ ದಿನ ಆರೋಪಿತರು ಕುರಿ ಕಾಯುವ ಕೆಲಸಕ್ಕೆ ಹೋಗಿದ್ದರು ಎಂದರೆ ಸರಿ. ಕುರಿ ಕಸ ಮತ್ತು ಸಗಣಿಯನ್ನು ಹಾಕುತ್ತಿದ್ದರು ಎಂದು ಹೇಳಿದ ಗೋಡೆ ಆರೋಪಿತರಿಗೆ ಸೇರಿದ್ದು ಎಂದರೆ ಸರಿ. ಆ ದಿನ ಆರೋಪಿತರು ಯಾರೂ ಗೊಬ್ಬರವನ್ನು ತುಂಬುತ್ತಿರಲಿಲ್ಲ ಎಂದರೆ ಸರಿ.

12. ನಿಮ್ಮ ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ಜಾಗದ ವಿಚಾರದಲ್ಲಿ ಗಲಾಟೆ ಇದೆ ಎಂದರೆ ಸರಿ. ಈಗ ನೀವು

ಹೊಸಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದೀರಿ ಎಂದರೆ ಸರಿ. ಆರೋಪಿತರು ಗಲಾಟೆ ಮಾಡಿದ್ದರು ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಟ್ರಾಕ್ಟರ್ ಗೆ ಕುರಿ ಮತ್ತು ದನದ ಸಗಣಿಯನ್ನು ಏರುತ್ತಿದ್ದರು ಮತ್ತು ನೆಲಗಡಲೆಯ ಕಸವನ್ನು ನಮ್ಮ ಮನೆಯ ಕಡೆಗೆ ತಳ್ಳುತ್ತಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ಆಗ ನಾನು ಮತ್ತು ನನ್ನ ಗಂಡ ಅಲ್ಲಿಗೆ ಹೋಗಿ ಆ ರೀತಿ ಕಸವನ್ನು ನಮ್ಮ ಮನೆಯ ಕಡೆಗೆ ತಳ್ಳಬೇಡಿ ಎಂದು ಹೇಳಿದೆವು, ಆಗ 2 ನೇ ಆರೋಪಿ ಲೋಫರ್ ಮುಂಡೆ, ಬೇವರ್ಸಿ ಮುಂಡೆ, ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ದೊಣ್ಣೆಯಿಂದ ನನ್ನ ತಲೆಯ ಬುರುಡೆಗೆ ಹೊಡೆದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನನ್ನ ತಲೆಯ ಬುರುಡೆ ಹೊಡೆದುಕೊಂಡು ರಕ್ತ ಬಂದು ನನ್ನ ಬಟ್ಟೆಗಳಿಗೆಲ್ಲಾ ರಕ್ತವಾಯಿತು, ನನ್ನ ಗಂಡ ನನ್ನನ್ನು ಬಿಡಿಸಲು ಬಂದಾಗ 3 ನೇ ಆರೋಪಿ ಗೀತಮ್ಮ ಬಿದಿರು ಕೋಲಿನಿಂದ ನನ್ನ ಗಂಡನ ಬೆನ್ನಿಗೆ ಹೊಡೆದಳು, ಅಷ್ಟರಲ್ಲಿ ಅಲ್ಲಿಗೆ ಚಂದ್ರಪ್ಪ, ಕಾಂತರಾಜು, ಸಣ್ಣಜ್ಜ, ಕಂಬಣ್ಣ ರವರು ಬಂದು ಗಲಾಟೆ ಬಿಡಿಸಿದರು, ನಂತರ ನನ್ನ ಸಂಬಂಧಿ ಶ್ರೀಧರ ಅಲ್ಲಿಗೆ ಬಂದು ನನ್ನನ್ನು ಮತ್ತು ನನ್ನ ಗಂಡನನ್ನು ಬೈಕಿನಲ್ಲಿ ಅಜ್ಜಂಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲಿಸಿದನು ಎಂದು

ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

14. ನಾವು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಅಜ್ಜಂಪುರ ಪೊಲೀಸರು ಅಲ್ಲಿಗೆ ಬಂದು ನಮ್ಮನ್ನು ವಿಚಾರಿಸಿದರು, ಆಗ ನಾನು ಅವರಿಗೆ ಆರೋಪಿತರ ವಿರುದ್ಧ ನಿಪಿ.1 ರಂತೆ ದೂರನ್ನು ಕೊಟ್ಟಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ನಾವು ಸದರಿ ಆಸ್ಪತ್ರೆಯಲ್ಲಿಯೇ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆವು, ಮಾರನೇ ದಿನ ಪೊಲೀಸರು ನನ್ನನ್ನು ಮತ್ತು ನನ್ನ ಗಂಡನನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು, ನಾನು ನಮ್ಮ ಮನೆಯ ಮುಂಭಾಗದಲ್ಲಿದ್ದ ಮಣ್ಣಿನ ರಸ್ತೆಯಲ್ಲಿ ಪೊಲೀಸರಿಗೆ ಸ್ಥಳವನ್ನು ತೋರಿಸಿ ಆರೋಪಿತರು ನನ್ನ ಮತ್ತು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದೆನು, ಅಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡು ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು, ಆ ಸಮಯದಲ್ಲಿ ಮಂಜುನಾಥ್ ಮತ್ತು ಇನ್ನೊಬ್ಬರು ಹಾಜರಿದ್ದು ಸಹಿ ಮಾಡಿದ್ದಾರೆ, ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಸ್ಥಳದಲ್ಲಿ ಮಣ್ಣಿನ ಮೇಲೆ ಬಿದ್ದಿದ್ದ ನನ್ನ ರಕ್ತವನ್ನು ಮಣ್ಣಿನ ಸಮೇತ ಕವರ್ ಗೆ ಹಾಕಿ ತೆಗೆದುಕೊಂಡರು ಮತ್ತು ಸ್ಥಳದಲ್ಲಿದ್ದ ಬೇರೆ ಮಣ್ಣನ್ನು ಸಹ ಕವರ್ ಗೆ ಹಾಕಿ ತೆಗೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

15. ಘಟನಾ ಸಮಯದಲ್ಲಿ ನಾನು ಬಿದ್ದಿದ್ದ ಸ್ಥಳದಲ್ಲಿ ಇದ್ದ ಒಂದು ದೊಣ್ಣೆ ಮತ್ತು ಒಂದು ಬಿದಿರಿನ ಕೋಲನ್ನು ನಾನು

ಪೊಲೀಸರಿಗೆ ಕೊಟ್ಟು 2 ಮತ್ತು 3 ನೇ ಆರೋಪಿತರು ನನ್ನ ಮತ್ತು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ದೊಣ್ಣೆ ಮತ್ತು ಕೋಲು ಅವೇ ಎಂದು ತಿಳಿಸಿದೆನು, ಅವುಗಳನ್ನು ಪೊಲೀಸರು ತೆಗೆದುಕೊಂಡರು, ಘಟನಾ ಸಮಯದಲ್ಲಿ ನಾನು ಬಿಳಿಯ ಬಣ್ಣದ ಹೂವುಗಳಿರುವ ಹಸಿರು ಬಣ್ಣದ ಸೀರೆಯನ್ನು ಮತ್ತು ಒಳಲಂಗವನ್ನು ಧರಿಸಿದ್ದೆನು, ಅವುಗಳಿಗೆ ರಕ್ತದ ಕಲೆಗಳಾಗಿದ್ದವು, ಅವುಗಳನ್ನೂ ಸಹ ಆ ಸಮಯದಲ್ಲಿ ಪೊಲೀಸರಿಗೆ ಕೊಟ್ಟೆನು, ಆ ದಿನ ಪೊಲೀಸರು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ನಿಪಿ.2 ರಂತೆ ಮಹಜರನ್ನು ಮಾಡಿಕೊಂಡು ಅದಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಸಮಯದಲ್ಲಿ ಪೊಲೀಸರು ನಿಪಿ.3 ರಂತೆ ಫೋಟೋವನ್ನು ತೆಗೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

16. ಮು.ಮಾ.6 ಎಂದು ಗುರುತಿಸಲ್ಪಟ್ಟಿರುವ ಕೋಲನ್ನು ತೋರಿಸಿ ಅದನ್ನು ಹುಲ್ಲನ್ನು ಬಡಿಯಲು ಬಳಸಲಾಗುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿಗೆ ಮು.ಮಾ.3 ಎಂದು ಗುರುತಿಸಲ್ಪಟ್ಟಿರುವ ಒಂದು ಕೋಲನ್ನು ತೋರಿಸಿ ಅದನ್ನು ಹುಲ್ಲನ್ನು ತೆಗೆಯಲು ಬಳಸಲಾಗುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮು.ಮಾ.1 ರಿಂದ ಮು.ಮಾ.6 ಅನ್ನು ನೀವು ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು

ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

17. ಸಾಕ್ಷಿಗೆ ನಿಪಿ.1 ಎಂದು ಗುರುತಿಸಲ್ಪಟ್ಟಿರುವ ದೂರಿನಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ತೋರಿಸಿ ಸದರಿ ಗುರುತನ್ನು ನೀವು ಪೊಲೀಸ್ ಠಾಣೆಯಲ್ಲಿ ಹಾಕಿದ್ದೀರಿ ಎಂದರೆ ಸಾಕ್ಷಿ ಮೊದಲಿಗೆ ಹೌದು ಎಂದು ನುಡಿದು ನಂತರ ಆಸ್ಪತ್ರೆಯಲ್ಲಿ ಪೊಲೀಸರು ಬಂದಾಗ ಹಾಕಿದ್ದೇನೆ ಎನ್ನುತ್ತಾರೆ.

18. ಸಾಕ್ಷಿಗೆ ನಿಪಿ.2 ಎಂದು ಗುರುತಿಸಲ್ಪಟ್ಟಿರುವ ದೂರಿನಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ತೋರಿಸಿ ಸದರಿ ಗುರುತನ್ನು ನೀವು ಪೊಲೀಸ್ ಠಾಣೆಯಲ್ಲಿ ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

19. ಪೊಲೀಸರು ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ನಿಪಿ.3 ರಂತೆ ಫೋಟೋವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿತರು ಇರಲಿಲ್ಲ ಮತ್ತು ನಿಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿಯ ಮಗಳ ಜೊತೆ ನೀವು ಗಲಾಟೆಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ಆ ವಿಚಾರವನ್ನು ಕೇಳಲು 2 ನೇ ಆರೋಪಿ ಬಂದಾಗ ನೀವು ಆತನ ಕೈಯನ್ನು ಕಚ್ಚಿ ಗಾಯ ಮಾಡಿದ್ದೀರಿ ಎಂದರೆ ಸರಿಯಲ್ಲ. ಆ ಬಗ್ಗೆ 2 ನೇ ಆರೋಪಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾನೆ ಎಂದರೆ ಸರಿ.

20. ಪೊಲೀಸರಿಗೆ ಒತ್ತಾಯ ಹೇರಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಪೊಲೀಸರಿಗೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನೀವು ಹೇಳಿದಂತೆ ಯಾವುದೇ ಕೃತ್ಯವೆಸಗದಿದ್ದರೂ ಸಹ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್